


بسم اللهِ الرّحمٰن الرّحيم

# ವಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–01–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಪ್ರಸ್ತಾಪಿಸಲಾಗುವ ಕಾರ್ಯಾಚರಣೆಗಳಲ್ಲಿ ಒಂದು ಉಸೈರ್ ಬಿನ್ ರಿಝಾಮ್‌ನ ಕಡೆಗೆ ನಡೆಸಲಾದ ಅಬ್ದುಲ್ಲಾಹ್ ಬಿನ್ ರವಾಹ್‌ರ ಕಾರ್ಯಾಚರಣೆಯಾಗಿದೆ. ಈ ಕಾರ್ಯಾಚರಣೆ ಹಿಜರಿ 6ರಲ್ಲಿ ಉಸೈರ್ ಅಥವಾ ಉಸೈರ್ ಬಿನ್ ರಿಝಾಮ್‌ನ ಕಡೆಗೆ ಖೈಬರ್‌ನಲ್ಲಿ ನಡೆಯಿತು.

ಇದರ ವಿವರಣೆ ಏನೆಂದರೆ, ಅಬೂ ರಾಫೀಅ್ ಬಿನ್ ಅಬಿಲ್ ಹಖೀಖ್‌ನನ್ನು ವಧಿಸಲಾದಾಗ ಯಹೂದಿಯರು ಉಸೈರ್ ಬಿನ್ ರಿಝಾಮ್‌ನನ್ನು ತಮ್ಮ ಅಮೀರ್ ಆಗಿ ನಿಶ್ಚಯಿಸಿದರು. ಆತನು ಯಹೂದಿಯರನ್ನು ಸಂಬೋಧಿಸಿ ಹೀಗೆ ಹೇಳಿದನು: ನನ್ನ ಜೊತೆಗಾರರರಲ್ಲಿ ಯಾರೂ ಮಾಡಿರದಂತಹ ಒಂದು ಕೆಲಸವನ್ನು ನಾನು ಮಾಡುವೆನು. ನಾನು ಗ್ರತ್‌ಫಾನ್ ಗೋತ್ರದ ಕಡೆಗೆ ಹೋಗಿ ಅವರನ್ನು ಒಂದುಗೂಡಿಸಿವೆನು. ನಾವು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರ ಬಳಿಗೆ ಹೋಗಿ ಅವರ ಮನೆಗೆ ನುಗ್ಗುವೆವು. ಯಾವನಾದರೂ ತನ್ನ ಶತ್ರುವಿನ ಮನೆಗೆ ಹೋಗಿ ದಾಳಿ ನಡೆಸಿದರೆ ಆತನು ತನ್ನ ಉದ್ದೇಶದಲ್ಲಿ ಸಾಕಷ್ಟು ಮಟ್ಟಿಗೆ ಸಫಲನಾಗುತ್ತಾನೆ. ಹೀಗೆ ಆತನು ಗ್ರತ್‌ಫಾನ್ ಮತ್ತು ಇತರ ಗೋತ್ರಗಳ ಕಡೆಗೆ ಹೋಗಿ ರಸೂಲುಲ್ಲಾಹ್(ಸ)ರ ವಿರುದ್ಧ ಯುದ್ಧಕ್ಕಾಗಿ ಜನರನ್ನು ಒಟ್ಟುಗೂಡಿಸಲು ತೊಡಗಿದನು.

ಅದರ ವಿವರಣೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಈ ಸ್ಥಿತಿಗಳ ಬಗ್ಗೆ ಗೊತ್ತಾದಾಗ ಅವರು ಕೂಡಲೇ ಅನ್ಸಾರಿ ಸಹಾಬಿಯಾದ ಅಬ್ದುಲ್ಲಾಹ್ ಬಿನ್ ರವಾಹ್(ರ)ರನ್ನು ಇತರ ಮೂರು ಸಹಾಬಿಯರ ಜೊತೆಗೆ ಖೈಬರ್‌ನ ಕಡೆಗೆ ಕಳುಹಿಸಿದರು. ಹೀಗೆ ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಅವರ ಜೊತೆಗಾರರು ಹೊರಟರು ಮತ್ತು ರಹಸ್ಯವಾಗಿ ಎಲ್ಲ ಸ್ಥಿತಿಗತಿಗಳನ್ನು ಹಾಗೂ ಅವಸ್ಥೆಗಳ ಮಾಹಿತಿ ಪಡೆದು ಲಭಿಸಿದ ಸುದ್ದಿಗಳು ಸರಿಯೆಂದು ಗೊತ್ತುಮಾಡಿ ಅಲ್ಲಿಂದ ಹಿಂದಿರುಗಿದರು. ಅದೇ ದಿನಗಳಲ್ಲಿ ಒಬ್ಬ ಮುಸ್ಲಿಮೇತರ ವ್ಯಕ್ತಿಯಾದ ಖಾರಿಜ ಬಿನ್ ಹುಸೈಲ್ ಆಕಸ್ಮಿಕವಾಗಿ ಖೈಬರ್‌ನಿಂದ ಮದೀನಕ್ಕೆ ಬಂದನು ಮತ್ತು ಅಬ್ದುಲ್ಲಾಹ್ ಬಿನ್ ರವಾಹ್(ರ)ರಿಗೆ ಲಭಿಸಿದ ಮಾಹಿತಿ ಸರಿ ಎಂದು ಆತನು ಹೇಳಿದನು.

ಈ ರುಜುವಾತಿನ ನಂತರ ಅಬ್ದುಲ್ಲಾಹ್ ಬಿನ್ ರವಾಹ್(ರ)ರ ನಾಯಕತ್ವದಲ್ಲಿ ಮೂವತ್ತು ಸಹಾಬಿಯರ ಒಂದು ತುಕಡಿಯನ್ನು ಖೈಬರ್‌ನ ಕಡೆಗೆ ಹಝ್ರತ್ ಪೈಗಂಬರ್(ಸ) ಕಳುಹಿಸಿದರು. ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಉಸೈರ್ ಬಿನ್ ರಿಝಾಮ್‌ನ ನಡುವೆ ಖೈಬರ್‌ನಲ್ಲಿ ನಡೆದ ಮಾತುಕತೆಯಿಂದ ಗೊತ್ತಾಗುವುದೇನೆಂದರೆ, ಉಸೈರ್‌ನನ್ನು ಮದೀನಕ್ಕೆ ಕರೆದು ತಂದು ಆಗುತ್ತಿರುವ ಪಿತೂರಿಗಳು ನಿಂತುಹೋಗುವಂತಹ ಹಾಗೂ ದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯ ಸ್ಥಿತಿ ಉಂಟುಮಾಡುವಂತಹ ಒಂದು ಒಪ್ಪಂದವನ್ನು ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಬಯಸಿದ್ದರು. ಈ ಉದ್ದೇಶವನ್ನು ಈಡೇರಿಸಲು ಹಝ್ರತ್ ಪೈಗಂಬರ್(ಸ) ಎಷ್ಟರ ಮಟ್ಟಿಗೆ ತಯಾರಾಗಿದ್ದರು ಎಂದರೆ, ಉಸೈರ್‌ನನ್ನು ಖೈಬರಿನ ಪ್ರದೇಶದ ಅಮೀರ್ ಆಗಿ ಒಪ್ಪಬೇಕಾಗಿ ಬಂದರೆ ಅದನ್ನು ಕೂಡ ಒಪ್ಪಲು ಸಿದ್ಧರಾಗಿದ್ದರು. ಅತ್ಯಾಸೆ ಹೊಂದಿದ್ದ ಉಸೈರ್‌ನಿಗೆ ಈ ಸಲಹೆ ಇಷ್ಟವಾಯಿತು. ಆತನ ಮನಸ್ಸಲ್ಲಿ ಬೇರೆ ಏನಾದರೂ ಉದ್ದೇಶ ಅಡಗಿರುವ ಸಾಧ್ಯತೆಯೂ ಇತ್ತು. ಅಂತೂ ಈ ಸಲಹೆ ಇಷ್ಟವಾಯಿತು ಎಂದು ಆತನು ಹೇಳಿಕೊಂಡನು. ಒಟ್ಟಿನಲ್ಲಿ ಅಬ್ದುಲ್ಲಾಹ್ ಬಿನ್ ರವಾಹ್‌ನ ತಂಡದೊಂದಿಗೆ ಮದೀನಕ್ಕೆ ಹೊರಡಲು ಉಸೈರ್ ತಯಾರಾದನು. ಅಬ್ದುಲ್ಲಾಹ್ ಬಿನ್ ರವಾಹ್(ರ)ರ ಹಾಗೆಯೇ ಆತನು ಕೂಡ ಮೂವತ್ತು ಯಹೂದಿಗಳನ್ನು ತನ್ನ ಜೊತೆಗೆ ಕೊಂಡು ಹೋದನು. ಈ ಎರಡೂ ಪಕ್ಷಗಳು ಖೈಬರ್‌ನಿಂದ ಹೊರಟು ಅಲ್ಲಿಂದ ಆರು ಮೈಲು ದೂರದಲ್ಲಿರುವ ಖರ್‌ಖರ ಎಂಬ ಪ್ರದೇಶಕ್ಕೆ ತಲುಪಿದಾಗ ಉಸೈರ್‌ನ ಉದ್ದೇಶ ಬದಲಾಯಿತು. ಆತ ಮೊದಲೇ ದುರುದ್ದೇಶವನ್ನು ಹೊಂದಿದ್ದನು ಎಂದಾದರೆ, ಅದನ್ನು ಪ್ರಕಟಗೊಳಿಸುವ ಸಮಯ ಬಂತು ಎಂದೂ ಹೇಳಬಹುದಾಗಿದೆ. ಹೀಗೆ ಆ ಜಾಗದಲ್ಲಿ ಯಾತ್ರೆಯ ಮಾರ್ಗ ಮಧ್ಯದಲ್ಲೇ ಮುಸ್ಲಿಮರ ಮತ್ತು ಯಹೂದಿಯರ ನಡುವೆ ಯುದ್ಧ ಶುರುವಾಯಿತು. ಉಭಯ ಪಕ್ಷಗಳು ಸಂಖ್ಯೆಯಲ್ಲಿ ಸಮಾನವಾಗಿದ್ದುವು. ಆದರೆ ಯಹೂದಿಯರು ಮೊದಲಿನಿಂದಲೇ ಮಾನಸಿಕವಾಗಿ ಯುದ್ಧಕ್ಕಾಗಿ ಸಿದ್ಧರಾಗಿದ್ದರು ಮತ್ತು ಮುಸ್ಲಿಮರು ಯುದ್ಧದ ಉದ್ದೇಶವನ್ನು ಕಿಂಚಿತ್ತೂ ಹೊಂದಿರಲಿಲ್ಲ. ಆದಾಗ್ಯೂ ಕೆಲವು ಮುಸ್ಲಿಮರು ಗಾಯಗೊಂಡರು ಕೂಡ ಅಲ್ಲಾಹನ ಅನುಗ್ರಹದಿಂದ ಅವರಲ್ಲಿ ಯಾರಿಗೂ ಜೀವಹಾನಿ ಉಂಟಾಗಲಿಲ್ಲ. ಆದರೆ ಮತ್ತೊಂದೆಡೆ ಎಲ್ಲ ಯಹೂದಿಯರು ತಮ್ಮ ಮೋಸಗಾರಿಕೆಯ ಫಲವನ್ನು ಸವಿಯುತ್ತಾ ನಾಶವಾದರು.

ಸಹಾಬಿಯರ ಈ ತಂಡ ಮದೀನಕ್ಕೆ ಮರಳಿತು. ಹಝ್ರತ್ ಪೈಗಂಬರ್(ಸ)ರಿಗೆ ಸ್ಥಿತಿಗತಿಗಳ ಬಗ್ಗೆ ಗೊತ್ತಾದಾಗ, ಮುಸ್ಲಿಮರು ಸುರಕ್ಷಿತರಾಗಿ ಮರಳಿ ಬಂದದ್ದಕ್ಕಾಗಿ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಅಲ್ಲಾಹನು ನಿಮ್ಮನ್ನು ದುಷ್ಟ ಪಕ್ಷದಿಂದ ರಕ್ಷಿಸಿದ್ದಕ್ಕೆ

ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಮಾರ್ಗದಲ್ಲಿ ಹೊಂಚು ಹಾಕಿ ವಧಿಸಬೇಕು ಎಂಬ ಉದ್ದೇಶದಿಂದಲೇ ಉಸೈರ್ ಮುಂತಾದವರನ್ನು ಅಬ್ದುಲ್ಲಾಹ್ ಬಿನ್ ರವಾಹ್(ರ)ರ ಪಕ್ಷದವರು ಖೈಬರ್‌ನಿಂದ ಹೊರಗೆ ತಂದಿದ್ದರು ಎಂದು ಈ ಘಟನೆಯ ಕುರಿತು ಕೆಲವು ಕ್ರೈಸ್ತ ಚರಿತ್ರೆಗಾರರು ಆಕ್ಷೇಪಿಸುತ್ತಾರೆ. ಆದರೆ ಮುಸ್ಲಿಮರು ಈ ಉದ್ದೇಶದಿಂದ ಅಲ್ಲಿಗೆ ಹೋಗಿದ್ದರು ಎಂಬುದಕ್ಕೆ ಚರಿತ್ರೆಯಿಂದ ಯಾವುದೇ ಪುರಾವೆ ಲಭಿಸುವುದಿಲ್ಲ. ಅದಲ್ಲದೇ 'ಎಲೈ ಅಲ್ಲಾಹನ ಶತ್ರು, ನೀನು ಮೋಸ ಮಾಡಲು ಉದ್ದೇಶಿಸುತ್ತಿದ್ದೀಯಾ' ಎಂದು ಅಬ್ದುಲ್ಲಾಹ್ ಬಿನ್ ಉನೈಸ್(ರ) ಕೇಳಿದ ಮತ್ತು 'ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸು, ಅವನು ನಿಮ್ಮನ್ನು ಆ ದುಷ್ಟ ಪಕ್ಷದಿಂದ ರಕ್ಷಿಸಿದನು ಎಂಬ ಹಝ್ರತ್ ಪೈಗಂಬರ್(ಸ) ಹೇಳಿದ ಮಾತುಗಳ ಬಗ್ಗೆ ಮಾತ್ರ ಚಿಂತಿಸುವುದಾದರೆ, ಇತರ ಸಾಕ್ಷ್ಯಾಧಾರಗಳನ್ನು ಕಡೆಗಣಿಸಿದರೆ ಕೂಡ ಮುಸ್ಲಿಮರ ಉದ್ದೇಶ ಪೂರ್ಣವಾಗಿಯೂ ಒಳ್ಳೆಯದು ಮತ್ತು ಶಾಂತಿಪೂರ್ಣವಾಗಿತ್ತು ಎಂಬುದಕ್ಕೆ ಈ ಮಾತುಗಳೇ ಸಾಕಾದ ಪುರಾವೆಗಳಾಗಿವೆ.

ಮತ್ತೊಂದು ಕಾರ್ಯಾಚರಣೆ ಅಬೂಸುಫ್ಯಾನಿನ ಕಡೆಗೆ ಅಮ್ರ್ ಬಿನ್ ಉಮಯ್ಯ ಝುಮ್‌ರಿಯ ಕಾರ್ಯಾಚರಣೆಯಾಗಿದೆ. ಇಬ್ನು ಹಿಶಾಂ, ಇಬ್ನು ಕಸೀರ್ ಮತ್ತು ತಬರೀ ಮುಂತಾದವರು ಈ ಕಾರ್ಯಾಚರಣೆಯನ್ನು ರಜೀಅ್‌ನ ಘಟನೆಯ ನಂತರ ಹಿಜರೀ 4ರಲ್ಲಿ ನಡೆದದ್ದಾಗಿ ಹೇಳಿರುವರು. ಆದರೆ ಇಬ್ನು ಸಅದ್ ಮತ್ತು ಝುರ್‌ಖಾನಿ ಈ ಕಾರ್ಯಾಚರಣೆಯನ್ನು ಹಿಜರೀ 6ರಲ್ಲಿ ನಡೆದ ಕಾರ್ಯಾಚರಣೆಗಳ ಪಟ್ಟಿಯಲ್ಲಿ ಸೇರಿಸಿರುವರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಸಹ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಈ ಕಾರ್ಯಾಚರಣೆ ಹಿಜರೀ 6ರದ್ದು ಎಂದು ಹೇಳಿರುವರು.

ಈ ಕಾರ್ಯಾಚರಣೆಯ ವಿವರಣೆ ಹೀಗಿದೆ: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮಾರುಕಟ್ಟೆಯಲ್ಲಿ ನಡೆಯುತ್ತಿರುವಾಗ ಅವರನ್ನು ದಿಢೀರನೇ ವಧಿಸಬಹುದಾದ ಯಾವನಾದರೂ ನಿಮ್ಮಲ್ಲಿ ಇರುವನೇ? ಎಂದು ಖುರೈಶಿನ ಕೆಲವು ವ್ಯಕ್ತಿಗಳೊಡನೆ ಅಬೂಸುಫ್ಯಾನ್ ಕೇಳಿದರು. ಆಗ ಮರಳುಗಾಡಿನ ಒಬ್ಬ ವ್ಯಕ್ತಿ ಅಬೂಸುಫ್ಯಾನಿನ ಮನೆಗೆ ಬಂದು ಹೀಗೆ ಹೇಳಿದನು: ನೀವು ನನಗೆ ನೆರವಾಗುವುದಾದರೆ ನಾನು ಅವರ ಕಡೆಗೆ ಹೋಗುವೆನು ಮತ್ತು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ)ರ ಮೇಲೆ ಅಚಾನಕ್ಕಾಗಿ ಹಲ್ಲೆ ನಡೆಸುವೆನು. ನನ್ನ ಬಳಿ ಒಂದು ಚಾಕು ಇದೆ. ಅದು ಹದ್ದಿನ ರೆಕ್ಕೆಯ ಹಾಗೆ ಇದೆ. ಅದನ್ನು ಬಳಸಿ ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಹಲ್ಲೆ ನಡೆಸುವೆನು. ಅನಂತರ ನಾನು ಯಾವುದಾದರೂ ಯಾತ್ರಾ ತಂಡದೊಂದಿಗೆ ಸೇರುವೆನು ಮತ್ತು ಓಡಿಕೊಂಡು ಆ ಸಮುದಾಯದವರಿಂದಲೂ ಮುಂದಕ್ಕೆ ಧಾವಿಸುವೆನು. ಏಕೆಂದರೆ ನಾನು ಮಾರ್ಗದ ಕುರಿತು ಬಹಳ ನಿಪುಣನಾಗಿದ್ದೇನೆ. ಹೀಗೆ ಅಬೂಸುಫ್ಯಾನ್ ಆತನಿಗೆ ಒಂಟೆ ಮತ್ತು ಯಾತ್ರೆಗೆ ಬೇಕಾಗಿರುವ ಸಾಮಾನುಗಳನ್ನು ಕೊಟ್ಟರು. ಆತನು ರಾತ್ರಿ ಸಮಯದಲ್ಲಿ ಹೊರಟನು ಮತ್ತು ಮದೀನಕ್ಕೆ ತಲುಪಿ ಹಝ್ರತ್ ಪೈಗಂಬರ್(ಸ)ರ ಕುರಿತು ಅನ್ವೇಷಣೆ ನಡೆಸಲು ತೊಡಗಿದನು. ಕೊನೆಗೆ ಆತನಿಗೆ ಹಝ್ರತ್ ಪೈಗಂಬರ್(ಸ)ರ ಕುರಿತು ಹೇಳಲಾಯಿತು. ಆಗ ಆತನು ತನ್ನ ಒಂಟೆಯನ್ನು ಕಟ್ಟಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದನು. ಹಝ್ರತ್ ಪೈಗಂಬರ್(ಸ) ಬನೂ ಅಬ್ದುಲ್ ಅಶ್‌ಹಲ್‌ನ ಮಸೀದಿಯಲ್ಲಿದ್ದರು.

ಹಝ್ರತ್ ಪೈಗಂಬರ್(ಸ) ಆತನನ್ನು ನೋಡಿದ ಕೂಡಲೇ ಹೀಗೆ ಹೇಳಿದರು: ಖಂಡಿತವಾಗಿಯೂ ಈ ವ್ಯಕ್ತಿಗೆ ಮೋಸ ಮಾಡುವ ಉದ್ದೇಶವಿದೆ. ಆತನ ಮತ್ತು ಆತನ ಉದ್ದೇಶದ ನಡುವೆ ಅಲ್ಲಾಹನು ತಡೆಯಾಗಿ ನಿಂತಿದ್ದಾನೆ. ಹಾಗೆ ಆತನು ಹಝ್ರತ್ ಪೈಗಂಬರ್(ಸ)ರ ಮೇಲೆ ಹಲ್ಲೆ ನಡೆಸಲು ಮುಂದಾದನು. ಆಗ ಉಸೈದ್ ಬಿನ್ ಹುಝೈರ್ ಆತನನ್ನು ಆತನ ಹೊದಿಕೆಯ ಒಳಗಿನ ಅಂಚನ್ನು ಹಿಡಿದು ಹಿಂದಕ್ಕೆ ಎಳೆದರು. ಆಗ ದಿಢೀರನೇ ಆತನ ಕೈಯಿಂದ ಚಾಕು ಕೆಳಗೆ ಬಿತ್ತು. 'ನನ್ನ ರಕ್ತ, ನನ್ನ ರಕ್ತ' ಎಂದು ಆತನು ಕಿರುಚಿದನು. ಎಂದರೆ ನನ್ನನ್ನು ಜೀವಂತವಾಗಿ ಬಿಟ್ಟುಬಿಡು ಎಂದು ಹೇಳಿಕೊಂಡನು. ಹಝ್ರತ್ ಉಸೈದ್(ರ) ಆತನ ಕುತ್ತಿಗೆಯನ್ನು ಹಿಡಿದರು ಮತ್ತು ಬಿಟ್ಟುಬಿಟ್ಟರು. 'ನೀನು ಯಾರೆಂದು ನಿಜ ಹೇಳು' ಎಂದು ಹಝ್ರತ್ ಪೈಗಂಬರ್(ಸ) ಆತನೊಡನೆ ಕೇಳಿದರು. ನಾನು ಅಭಯವನ್ನು ಯಾಚಿಸುತ್ತೇನೆ ಎಂದು ಆತನು ಹೇಳಿದನು. ಸರಿಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆತನು ತನ್ನ ಕೆಲಸ ಮತ್ತು ಯಾವ ಕಾರ್ಯಕ್ಕಾಗಿ ಅಬುಸುಫ್ಯಾನ್ ಆತನನ್ನು ನಿಶ್ಚಯಿಸಿದ್ದರೋ ಅದರ ಬಗ್ಗೆ ತಿಳಿಸಿದನು. ಆಗ ಹಝ್ರತ್ ಪೈಗಂಬರ್(ಸ) ಆತನನ್ನು ಬಿಟ್ಟುಬಿಟ್ಟರು. ಈ ಕರುಣೆಯ ಕಾರಣದಿಂದ ಆತನು ಮುಸ್ಲಿಮನಾದನು.

ಅಬೂಸುಫ್ಯಾನಿನ ಈ ಕ್ರೂರವಾದ ಸಂಚಿನ ಕಾರಣದಿಂದ ಮಕ್ಕಾದವರ ಉದ್ದೇಶಗಳ ಬಗ್ಗೆ ಅರಿತಿರುವುದು ಮುಂಚೆಗಿಂತ ಹೆಚ್ಚು ಅಗತ್ಯವಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ತನ್ನ ಇಬ್ಬರು ಸಹಾಬಿಯರಾದ ಅಮ್ರ್ ಬಿನ್ ಉಮಯ್ಯ ಝುಮ್‌ರಿ(ರ) ಮತ್ತು ಸಲ್ಮ ಬಿನ್ ಅಸ್ಲಮ್(ರ)ರನ್ನು ಮಕ್ಕದ ಕಡೆಗೆ ಕಳುಹಿಸಿದರು. ಅಬೂಸುಫ್ಯಾನಿನ ಈ ಕೊಲೆಯ ಸಂಚು ಮತ್ತು ಆತನ ಹಿಂದಿನ ಕ್ರೂರ ಕೃತ್ಯಗಳನ್ನು ಮುಂದಿರಿಸಿಕೊಂಡು ಅವಕಾಶ ಸಿಕ್ಕರೆ ಇಸ್ಲಾಮಿನ ಈ ಎದುರಾಳಿಯನ್ನು ಕೊನೆಗೊಳಿಸಲು ಅವರಿಗೆ ಅನುಮತಿ ನೀಡಲಾಯಿತು. ಆದರೆ ಉಮಯ್ಯ ಮತ್ತು ಅವರ ಜೊತೆಗಾರ ಮಕ್ಕಾಗೆ ತಲುಪಿದಾಗ ಖುರೈಶಿಯರು ಜಾಗರೂಕರಾದರು. ಈ ಇಬ್ಬರು ಸಹಾಬಿಯರು ತಮ್ಮ ಜೀವವನ್ನು ರಕ್ಷಿಸಿ ಮದೀನಕ್ಕೆ ಮರಳಿ ಬಂದರು. ಮಾರ್ಗದಲ್ಲಿ ಅವರು ಖುರೈಶಿನ ಇಬ್ಬರು ಗೂಢಚರರನ್ನು ಭೇಟಿಯಾದರು. ಅವರನ್ನು ಖುರೈಶಿನ ಮುಖಂಡರು ಮುಸ್ಲಿಮರ ಚಲನವಲನಗಳನ್ನು ಗೊತ್ತುಮಾಡಲು ಮತ್ತು ಹಝ್ರತ್ ಪೈಗಂಬರ್(ಸ)ರ ಸ್ಥಿತಿಗಳನ್ನು ಅರಿಯಲು ಕಳುಹಿಸಿದ್ದರು. ಇದು ಕೂಡ ಖುರೈಶಿಯರ ಬೇರೊಂದು ಕ್ರೂರ ಸಂಚಿನ ಮುನ್ನುಡಿಯಾಗಿರಲೂ ಬಹುದು. ಆದರೆ ಅಲ್ಲಾಹನ ಅನುಗ್ರಹದಿಂದ ಉಮಯ್ಯ ಮತ್ತು ಸಲ್ಮರಿಗೆ ಖುರೈಶಿಯರ ಗೂಢಚಾರಿಕೆಯ ಬಗ್ಗೆ ಗೊತ್ತಾಯಿತು. ಆದ್ದರಿಂದ ಅವರು ಈ

ಗೂಢಚರರ ಮೇಲೆ ಹಲ್ಲೆ ನಡೆಸಿದರು. ಹೀಗೆ ಈ ಜಗಳದಲ್ಲಿ ಒಬ್ಬ ಗೂಢಚರನು ಕೊಲ್ಲಲ್ಪಟ್ಟನು ಮತ್ತು ಇನ್ನೊಬ್ಬನ್ನು ಬಂಧಿಸಿ ತಮ್ಮ ಜೊತೆಗೆ ಮದೀನಕ್ಕೆ ಮರಳಿ ತರಲಾಯಿತು.

(ಈ ವಿಷಯ ಮುಂದುವರೆಯುವುದು ಎಂದು ಹುಝೂರ್ ಹೇಳಿದರು.)

(ದುಆ ಮಾಡಲು ಮನವಿ ಮಾಡುತ್ತಾ ಹುಝೂರ್ ಹೇಳಿದರು:) ಪಾಕಿಸ್ತಾನದ ಸ್ಥಿತಿಗತಿಗಳಿಗಾಗಿ ದುಆ ಮಾಡಲು ನಾನು ಹೇಳುತ್ತಿರುತ್ತೇನೆ. ಕೆಲವೊಮ್ಮೆ ವಿರೋಧ ಬಹಳ ಹೆಚ್ಚು ತೀವ್ರಗೊಳ್ಳುತ್ತದೆ. ಆಡಳಿತ ವರ್ಗ ಮತ್ತು ಸರ್ಕಾರ ಕೂಡ ಉಗ್ರವಾದಿ ಮೌಲವಿಯರ ಕೈಗಳಲ್ಲಿ ಆಟಿಕೆಯ ವಸ್ತುಗಳಂತೆ ಆಗಿವೆ. ಮಸೀದಿಯ ಮಿನಾರ ಅಥವಾ ಮಿಹ್‌ರಾಬ್ ಬೀಳಿಸಲಾಗಿದೆ ಎಂದು ಮೊದಲು ವಾರ್ತೆ ಬಂದಿತ್ತು. ಅವರಿಗೆ ಅದರ ಮೇಲೆ ಆಕ್ಷೇಪವಿತ್ತು. ಆದರೆ ನಿನ್ನೆ ಅವರು ರಸ್ತೆ ಮಾಡುವ ನೆಪದಲ್ಲಿ ಇಷ್ಟು ಜಾಗ ನಾವು ಪಡೆಯುವೆವು ಮತ್ತು ಅಲ್ಲಿ ಬುಲ್‌ಡೋಸರ್‌ನಿಂದ ಜಾಗವನ್ನು ಸ್ವಚ್ಛಗೊಳಿಸುವೆವು ಎಂದು ನೋಟಿಸ್ ಕಳುಹಿಸಿದರು. ಆ ಪ್ರದೇಶದಲ್ಲಿ ಮಸೀದಿಯ ಸ್ವಲ್ಪ ಭಾಗವಾದ ಸ್ನಾನಗೃಹ ಇತ್ಯಾದಿಗಳು ಇದ್ದುವು. ಆದರೆ ಬುಲ್‌ಡೋಝರ್‌ನೊಂದಿಗೆ ಬಂದಾಗ ಅವರು ಮೌಲವಿಗಳ ಮಾತಿನ ಅನುಸಾರ ಪೂರ್ತಿ ಮಸೀದಿಯನ್ನು ಉರುಳಿಸಿದರು. ಈ ಮಸೀದಿಯನ್ನು ವಿಭಜನೆಗೆ ಮುಂಚಿತವಾಗಿ ನಿರ್ಮಿಸಲಾಗಿತ್ತು. ಬಹುಶಃ ಹಝ್ರತ್ ಚೌಧರಿ ಝುಫರುಲ್ಲಾಹ್ ಖ಼ಾನ್ ಸಾಹಿಬ್(ರ) ನಿರ್ಮಿಸಿದ್ದರು. ಅಂತೂ ಇತ್ತೀಚಿಗೆ ವಿರೋಧ ಇಷ್ಟರ ಮಟ್ಟಿಗೆ ವರ್ಧಿಸಿದೆ. ಅಲ್ಲಾಹನೇ ಅವರನ್ನು ಬೇಗನೇ ಹಿಡಿಗೂಡಬಲ್ಲನು. ಅವರ ಕುತಂತ್ರಗಳು ಅವರಿಗೆ ತಿರುಗೇಟಾಗಲಿ. ಆದ್ದರಿಂದ ಅಹ್ಮದಿಯರು ವಿಶೇಷವಾಗಿ ಪಾಕಿಸ್ತಾನದ ಅಹ್ಮದಿಯರು ಬಹಳ ಹೆಚ್ಚು ದುಆ ಮಾಡಬೇಕಾದ ಅಗತ್ಯವಿದೆ. ಇದರ ಬಗ್ಗೆ ಗಮನವಹಿಸಿರಿ.

ಅದೇ ರೀತಿಯಲ್ಲಿ ಪೆಲಸ್ತೀನಿನ ಕುರಿತು ಒಪ್ಪಂದ ನಡೆದಿದೆ ಎಂದು ಕೆಲವರು ಹೇಳುತ್ತಾರೆ. ಒಪ್ಪಂದ ಆಗಿಲ್ಲವೆಂದು ಕೆಲವೊಮ್ಮೆ ಹೇಳುತ್ತಾರೆ. ಒಪ್ಪಂದದ ನಂತರವೂ ಘಟನೆಗಳು ನಡೆಯುತ್ತಿವೆ. ಈ ಒಪ್ಪಂದ ಕಾರಣದಿಂದ ಕೆಲವರು ಅನಾವಶ್ಯಕವಾಗಿ ಸಂತೋಷವನ್ನು ಪ್ರಕಟಿಸಲು ತೊಡಗಿರುವರು. ಆದರೆ ದಜ್ಜಾಲಿ ಶಕ್ತಿಗಳ ಬಗ್ಗೆ ಯಾವುದೇ ಭರವಸೆಯಿಲ್ಲ ಎಂದು ಸಂತೋಷಪಡುವವರು ತಿಳಿಯಬೇಕಾಗಿದೆ. ಅವರು ಹೇಳುವುದು ಒಂದು, ಮಾಡುವುದು ಬೇರೊಂದು ಆಗಿದೆ. ಆದ್ದರಿಂದ ಇಷ್ಟು ಅಧಿಕ ಸಂತೋಷ ಭಾವನೆಯ ಅಗತ್ಯವಿಲ್ಲ. ಪೆಲಸ್ತೀನಿಯರಿಗಾಗಿ ದುಆ ಮಾಡಬೇಕಾದ ಅಗತ್ಯವಿದೆ. ಮುಸ್ಲಿಮರು ಬುದ್ಧಿ ಉಪಯೋಗಿಸಿ ತಮ್ಮ ಹಕ್ಕನ್ನು ಗಳಿಸಲು ಪ್ರಯತ್ನಿಸಬೇಕಾಗಿದೆ. ಅಲ್ಲಾಹನು ಮುಸ್ಲಿಂ ಸಮುದಾಯಕ್ಕೂ ಬುದ್ಧಿ ನೀಡಲಿ – ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಮೂವರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝಾ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)
At, ***'Masjid Mubarak'***, *Islamabad, Tilford,* U.K. On 17-01-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon